ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಬೋಧಕ - 145, ಬೋಧಕೇತರ - 161

ಆ) ಬೋಧಕ - 53, ಬೋಧಕೇತರ - 18

ಇ) ಮೂರು ವರ್ಷಗಳಿಂದ

ಈ) 2000ದ ಏಪ್ರಿಲ್‌ನಲ್ಲಿ ಬೋಧಕ ಹುದ್ದೆಗಳನ್ನು ಅಧಿಸೂಚಿಸಲಾಗುವುದು.

ಉ) ಸಂದರ್ಶನದ ಸಮಯದಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಹಾಗೂ ಮೆಕ್ಯಾನಿಕಲ್ ಇಂಜಿನೀಯರಿಂಗ್ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಲು ಅರ್ಹತೆವುಳ್ಳ ಶಿಕ್ಷಕರು ಲಭ್ಯವಿಲ್ಲದ್ದರಿಂದ

ರಾಜ್ಯದಲ್ಲಿ ಹೋಮಿಯೋಪತಿ ಚಿಕಿತ್ಸೆಯ ಅಭಿವೃದ್ಧಿ

1530 (1783) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಹೋಮಿಯೋಪತಿ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಈ ದಿಸೆಯಲ್ಲಿ ಕಳೆದ 3 ವರ್ಷಗಳಲ್ಲಿ ನಿಗದಿಪಡಿಸಲಾಗಿರುವ ಹಣವೆಷ್ಟು;

ಇ) ಈ ಚಿಕಿತ್ಸೆಯನ್ನು ಗ್ರಾಮ ಮಟ್ಟದವರಿಗೆ ಲಭಿಸುವಂತೆ ಮಾಡಲು ಸರ್ಕಾರದ ಸೂಕ್ತ ವ್ಯವಸ್ಥೆ ಮಾಡುವುದೇ?

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಹೋಮಿಯೋಪತಿ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಜಿಲ್ಲಾ ಮಟ್ಟದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳಲ್ಲಿಯೇ ಹಂತ ಹಂತವಾಗಿ ಹೋಮಿಯೋಪತಿ ವಿಭಾಗಗಳನ್ನು ತೆರೆಯಲಾಗುತ್ತಿದೆ. ಜಿಲ್ಲಾ ಪಂಚಾಯತ್‌ಗಳ ಬೇಡಿಕೆ ಮತ್ತು ಆಯುವ್ಯಯವನ್ನು ಅವಲಂಬಿಸಿ ಪ್ರತಿವರ್ಷ ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಗುತ್ತಿದೆ.

ಆ) ಕಳೆದ 3 ವರ್ಷಗಳಲ್ಲಿ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ನಿಗದಿಪಡಿಸಿದ ಹಣ ಕೆಳಗಿನಂತಿದೆ:-

(ರೂ. ಲಕ್ಷಗಳಲ್ಲಿ)

	1997-98	1998-99	1999-2000
ರಾಜ್ಯವಲಯ	31.05	35.58	43.25
ಜಿಲ್ಲಾವಲಯ	41.22	42.49	49.43
ಒಟ್ಟು	72.72	78.07	92.68

ಇ) ಸರ್ಕಾರವು ಈ ದಿಸೆಯಲ್ಲಿ ಕಾರ್ಯಪ್ರವತ್ತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ 25 ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. 1999-2000ನೇ ಸಾಲಿನಲ್ಲಿ 10 ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗಿದೆ. ಮುಂದಿನ ವರ್ಷಗಳಲ್ಲೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಅವಶ್ಯಕತೆ ಮತ್ತು ಆಯುವ್ಯಯ ಅವಲಂಬಿಸಿ ಸರ್ಕಾರಿ ಹೋಮಿಹೋಪತಿ ಚಿಕಿತ್ಸಾಲಯಗಳನ್ನು ತೆರೆಯಲಾಗುವುದು.

ಲೈಬ್ರರಿ ಸೈನ್ಸ್ ಡಿಪ್ಲೋಮ ಕೋರ್ಸ್

1531 (1862) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಲೈಬ್ರರಿ ಸೈನ್ಸ್ ಡಿಪ್ಲೊಮೋ ಕೋರ್ಸ್‌ನ್ನು ರಾಜ್ಯದ ಯಾವ ಯಾವ ಜಿಲೆಗಳಲ್ಲಿ ಪ್ರಾರಂಭಿಸಲಾಗಿದೆ?

ಆ) ಹುಬ್ಬಳ್ಳಿಯಲ್ಲಿ ಇಲ್ಲಿಯವರೆಗೆ ಈ ಕೋರ್ಸನ್ನು ಪ್ರಾಂಭಿಸದೇ ಇರುವುದಕ್ಕೆ ಕಾರಣವೇನು?

ಇ) ಬೆಂಗಳೂರಿಗೆ ಹೋಗಿ ಉತ್ತರ ಕರ್ನಾಟಕ ವಿದ್ಯಾರ್ಥಿನಿಯರಿಗೆ ಹಣ ಖರ್ಚು ಮಾಡಿ ಶಿಕ್ಷಣ ಪಡೆಯಲು ಸಾಧ್ಯವೇ?

ಈ) ಈ ರೀತಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?

ಉ) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಮಂಜೂರಾದ ಗ್ರಂಥಪಾಲಕ ಹುದ್ದೆಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಸರ್ಕಾರವು ಮಾಡಿಕೊಂಡ ಹುದ್ದೆಗಳೆಷ್ಟು?

ಊ) ಅದರಲ್ಲಿ ಉತ್ತರ ಕರ್ನಾಟಕ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಋ) 1999-2000ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ಗ್ರಂಥಾಲಯ ಸಹಾಯಕರ ಹುದ್ದೆಗಳ ನೇಮಕಾತಿಗೆ ಕರೆಯಲಾಗಿದೆ. ಸದರಿ ನೇಮಕಾತಿಗೆ ಉತ್ತರ ಕರ್ನಾಟಕದಿಂದ ತರಭೇತಿ ಹೊಂದಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಲೈಬ್ರರಿ ಸೈನ್ಸ್ ಡಿಪ್ಲೊಮೋ ಕೋರ್ಸನ್ನು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು, ಮಂಗಳೂರು ಮತ್ತು ಹಾಸನದಲ್ಲಿ ಪ್ರಾರಂಭಿಸಲಾಗಿದೆ.

ಆ) ಆಯವ್ಯಯದ ಕೊರತೆ ಕಾರಣ ಸದರಿ ಕೋರ್ಸನ್ನು ಪ್ರಾಂಭ ಮಾಡಲು ಸಾಧ್ಯವಾಗಲಿಲ್ಲ.

ಇ) ಪ್ರಸ್ತುತ ಸದರಿ ಕೋರ್ಸ ಚಾಲ್ತಿಯಲ್ಲಿರುವ ಎಲ್ಲಾ ಮಹಿಳಾ ಪಾಲಿಟೆಕ್ನಿಕ್‌ಗಳಲ್ಲೂ ವಸತಿ ಸೌಲಭ್ಯ ಇರುತ್ತವೆ. ಹಾಗೂ ಉಚಿತ ಶಿಕ್ಷಣ ಸೌಲಭ್ಯ ಇರುತ್ತವೆ.

ಈ) ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಹೊಸ ಹಾಗೂ ಬೇಡಿಕೆ ಇರುವ ಕೋರ್ಸುಗಳನ್ನು ಉತ್ತರ ಕರ್ನಾಟಕಕ್ಕೆ ಸೇರಿದಂತೆ 1999-2000ನೇ ಸಾಲಿಗೆ